## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಸಿ.ಸಿ 703–2017** **ಪಿ. ಡಬ್ಲುಃ 02**

**ಸಿ. ಡಬ್ಲು 01**

| | |
|---|---|
| ಸಾಕ್ಷಿದಾರರ ಹೆಸರು  ತಂದೆಯ /ಗಂಡನ ಹೆಸರು | ರವಿ ಟಿ.ಕೆ<br>ಲೇ.ಟಿ.ಕೆ ಕೃಷ್ಣೇಗೌಡ |
| ವಯಸ್ಸು | 63 ವರ್ಷ |
| ಕೆಲಸ | ನಿವೃತ್ತ ವಲಯಲಾಧಿಕಾರಿ, ಮುಡಾ |
| ವಾಸ | ಮೈಸೂರು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 02–08–2022 |

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎನ್.ಜಿ.ಬಿ  ವಕೀಲರಿಂದಃ**

ಚುನಾವಣಾ ಸಮಯದಲ್ಲಿ ಪೊಲೀಸರೇ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸಲು ಸಾಧ್ಯವಾ ಗುವುದಿಲ್ಲ ಎಂದು ವಿಶೇಷ ಜಾಗೃತ ದಳವನ್ನು ರಚಿಸಲಾಗುತ್ತದೆ ಎಂದರೆ ಸರಿ. ಒಂದೊಂದು ಜಾಗೃತ ದಳದಲ್ಲಿ ಇಂತಿಷ್ಟು ಅಧಿಕಾರಿಗಳು ಮತ್ತು ಅವರಿಗೆ ಬೇಕಾದ ಸೌಲಭ್ಯಗಳನ್ನು ಸರ್ಕಾರವು ಪೂರ್ವ ನಿಯೋಜಿತವಾಗಿ ನೀಡಿರುತ್ತದೆ ಎಂದರೆ ಸರಿ. ಚುನಾವಣಾ ಸಮಯದಲ್ಲಿ ಯಾವುದಾದರು ಅನುಮಾನ ಬಂದರೆ ವಿಡಿಯೋ ಮಾಡುವ ಉದ್ದೇಶದಿಂದ ವಿಡಿಯೋಗ್ರಾಫ್ ಸೌಲಭ್ಯವನ್ನು ಸಹ ಸರ್ಕಾರ ನೀಡಿರುತ್ತದೆ ಎಂದರೆ ಸರಿ. ಘಟನಾ ದಿನದಂದು ನಾನೇ 5 ನೇ  playing squad ನ ಮುಖ್ಯಸ್ಥನಾಗಿದ್ದೆನು. ನನ್ನ ಪೂರ್ವ ಕಾರ್ಯ ಕ್ಷೇತ್ರ ಮುಡಾ ಎಂದರೆ ಸರಿ. ಘಟನಾ ದಿನಾಂಕದಂದು ನನ್ನನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಿದ್ದರಿಂದ ನಾನು ನಂಜಗೂಡಿನಲ್ಲೇ ಇದ್ದೆನು. ಕರ್ತವ್ಯಕ್ಕೆ ನಿಯೋಜನೆ ಆದ ಮೊದಲನೆ ದಿನ ನಾವು ಜಿಲ್ಲಾಧಿಕಾರಿಯವರಿಗೆ ವರದಿ ಮಾಡಬೇಕಾಗಿದ್ದು, ನಂತರ ವರದಿ ಮಾಡುವ ಅವಶ್ಯಕತೆ ಇರುವುದಿಲ್ಲ. ಯಾವುದಾದರು ಅಕ್ರಮ ಕಂಡುಬಂದಲ್ಲಿ ಅದನ್ನು ಜಿಲ್ಲಾಧಿಕಾರಿಯವರಿಗೆ ವರದಿ ಮಾಡಬೇಕು ಎಂದರೆ ಸರಿ. ಈ ಘಟನೆ ಬಗ್ಗೆ ನಾನು ಜಿಲ್ಲಾಧಿಕಾರಿಯವರಿಗೆ ಪತ್ರ ಮುಖೇನ ಯಾವುದೇ ಮಾಹಿತಿ ರವಾನಿಸಿರುವುದಿಲ್ಲ ನಾನು ನೇರವಾಗಿ ಜಿಲ್ಲಾಧಿಕಾರಿಯವರಿಗೆ ಮಾಹಿತಿ ರವಾನಿಸಿರುವುದಿಲ್ಲ. ಘಟನಾ ದಿನದಂದು ಪೂರ್ಣ ಪ್ರಮಾಣದ ವಿಚಾರಣೆ ಮಾಡಿದ ನಂತರ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ತಿಳಿಸಿ ಅವರ ಮಾರ್ಗದರ್ಶನದ ಮೇರೆಗೆ ಪ್ರಕಣವನ್ನು ದಾಖಲಿಸಿರುತ್ತೇನೆ. ಘಟನಾ ದಿನಾಂಕದಂದು ನಮ್ಮ ಮು.ಡಾ ಇಲಾಖೆಗೆ ಸೇರಿದ ಕೆಎ–09–5871 ಜೀಪಿನಲ್ಲಿ ಚುನಾವಣಾ ಕರ್ತವ್ಯ ಮಾಡುತ್ತಿದ್ದೆವು. ನಾವು ನಂಜಗೂಡಿನ ಗ್ರಾಮಾಂತರ ಪೋಲಿಸ್ ಠಾಣೆ ಮುಂಭಾಗ ಮಹೇಂದ್ರ ಬುಲೇರೋ ವಾಹನವನ್ನು ತಡೆದು ನಿಲ್ಲಿಸಿರುತ್ತೇನೆ. ಪೊಲೀಸ್ ಠಾಣೆಯ ಎರಡೂ ಬಂದಿಗಳಲ್ಲಿ ಚುನಾವಣಾ ತಪಾಸಣಾ ಶಿಬಿರವನ್ನು  ತಾತ್ಕಾಲಿಕವಾಗಿ ಶೆಡ್ ಹಾಕಲಾಗಿತ್ತು ಎಂದರೆ ಸಾಕ್ಷಿ ನಾನು ಅದನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಠಾಣೆಯ ಮುಂಭಾಗ ನಮ್ಮ ಟೀಂ ಅನ್ನು

ಹೊರತುಪಡಿಸಿ ಎಷ್ಟು ಜನ ಪೊಲೀಸರು ಇದ್ದರೂ ಎಂದು ಹೇಳಲಾಗುವುದಿಲ್ಲ, ಆದರೆ ನನ್ನೊಂದಿಗೆ ಇಬ್ಬರು ಸಿ.ಪಿ.ಐ ಗಳು ಇದ್ದರು. ಘಟನಾ ಸಂಬಂಧ ನಾನು ಒಂದು ಬಾರಿ ಗ್ರಾಮಾಂತರ ಪೋಲಿಸ್ ಠಾಣೆಗೆ ಹೋಗಿದ್ದೆನು. ಪೊಲೀಸರೆ ಚುನಾವಣಾ ಸಂಬಂಧ ವಿಲಕ್ಷಣ ದಳವನ್ನು ರಚನೆ ಮಾಡಿದ್ದರಿಂದ ನಮ್ಮ ದಳದ ಅವಶ್ಯಕತೆ ಇಲ್ಲದೇ ಇದ್ದರೂ ವಿನಾಕರಣ ಆರೋಪಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ನಾವು ಘಟನಾ ಸ್ಥಳದಲ್ಲಿ ಇದ್ದೆವು ಎಂದರೆ ಸರಿಯಲ್ಲ. ಆರೋಪಿಗಳ ವಾಹನವನ್ನು ಹಿಡಿದ ಸಮಯದಲ್ಲಿ ನಮ್ಮ ಬಳಿ ಇದ್ದ ವಿಡಿಯೋ ಕ್ಯಾಮರಾದಿಂದ ಘಟನೆಯನ್ನು ಚಿತ್ರೀಕರಿಸಿರುವುದಿಲ್ಲ. ಗ್ರಾಮಾಂತರ ಪೊಲೀಸ್ ಠಾಣೆಯ ಸಿ.ಸಿ ಟಿವಿಯನ್ನು ಅಳವಡಿಸಿದೆ ಎಂಬ ಮಾಹಿತಿಯನ್ನು ನಾನು ತಿಳಿದುಕೊಂಡಿರುವುದಿಲ್ಲ. ನಮ್ಮ ಟೀಂ ನಂತೆಯೇ ಗ್ರಾಮಾಂತರ ಪೊಲೀಸ್ ಠಾಣೆಯವರು ಸಹ ಚುನಾವಣಾ ಸಮಯ ವಿಡಿಯೋ ಚಿತ್ರೀಕರಣ ಮಾಡಿಕೊಳ್ಳುತ್ತಿದ್ದರು ಎಂದರೆ ನಾನು ಗಮನಿಸಿರುವುದಿಲ್ಲ. ಆರೋಪಿತರ ವಾಹನವು ಮೇಲ್ನೋಟಕ್ಕೆ ಎ.ಟಿ.ಎಂ ಯಂತ್ರಕ್ಕೆ ಹಣ ತುಂಬುವ ಮಾದರಿಯಲ್ಲಿ ಇರುತ್ತದೆ ಎಂದರೆ ಸರಿ. ನಮ್ಮ ತನಿಖೆಯಿಂದ ಸದರಿ ವಾಹನವ ಎ.ಟಿ.ಎಂ ಯಂತ್ರಕ್ಕೆ ಹಣ ತುಂಬುವ ವಾಹನ ಎಂದು ಗೊತ್ತಾಯಿತು ಎಂದರೆ ಸರಿ. ಘಟನಾ ಸಂಬಂಧ ನಾವು ಗ್ರಾಮಾಂತರ ಠಾಣೆಗೆ ಮಾಹಿತಿ ನೀಡಿರುವುದಿಲ್ಲ, ಆ ರೀತಿ ಮಾಹಿತಿ ನೀಡಲು ನನಗೆ ತೊಂದರೆ ಇರುವುದಿಲ್ಲ. ನಾನು ಘಟನಾ ದಿನದಂದು ಗನ್ ಮ್ಯಾನ್ ಅನ್ನು ನೋಡಿರುವುದಿಲ್ಲ, ಕೇವಲ ನಾನು ಆರೋಪಿಗಳನ್ನು ಮಾತ್ರ ನೋಡಿರುತ್ತೇನ. ಗನ್‌ಮ್ಯಾನ್ ಇದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾವು ಹಿಡಿದಂತಹ ಮಹೇಂದ್ರ ಪಿಕ್ ಅಫ್ ಬುಲೆರೋ ವಾಹನಕ್ಕೆ ಸಿ.ಸಿ ಟಿ.ವಿ ಅಳವಡಿಸಿರುವುದನ್ನು ನಾನು ನೋಡಿರುವುದಿಲ್ಲ. ನನಗೆ ತಿಳಿದ ಆಗೆ ಮಹೇಂದ್ರ ಪಿಕ್ ಅಫ್ ಬುಲೆರೋದಿಂದ ಯಾರು ತಪ್ಪಿಸಿಕೊಂಡು ಹೋಗಿರುವುದಿಲ್ಲ. ಅದೇ ರೀತಿ ಗನ್ ಮ್ಯಾನ್‌ನಿಂದ ಹಿಡಿದು ಯಾರು ನಮಗೆ ಪ್ರತಿರೋದ ತೋರಿಸಿರುವುದಿಲ್ಲ ಎಂದರೆ ಸರಿ. ಎ.ಟಿ.ಎಂ ಯಂತ್ರಕ್ಕೆ ಹಣ ತುಂಬುವ ವಾಹನಗಳಿಗೆ ಬ್ಯಾಂಕಿನವರು ಸಾಮಾನ್ಯವಾಗಿ ಯಾವ ದಾಖಲೆಯನ್ನು ನೀಡುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಘಟನಾ ಸ್ಥಳದಲ್ಲಿಯೇ ಮಹಜರ್ ಕ್ರಮವನ್ನು ಜರುಗಿಸಿ ಆನಂತರ ಆರೋಪಿಗೊಂದಿಗೆ ಪಟ್ಟಣ ಪೊಲೀಸ್ ಠಾಣೆಗೆ ಬಂದು ದೂರು ನೀಡಿರುತ್ತೇನೆ. ಘಟನಾ ಸ್ಥಳವು ಯಾವ ಸರಹದ್ದಿಗೆ ಬರುತ್ತದೆ ಎಂದು ಗೊತ್ತಿಲ್ಲ. ಆದರೆ ಘಟನಾ ಸ್ಥಳವು ಪಟ್ಟಣ ಪೊಲೀಸ್ ಠಾಣೆಯ ಸರಹದ್ದಿನಲ್ಲಿ ಬರುತ್ತದೆ ಎಂದು ತಿಳಿಸಿದ ಮೇರೆಗೆ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ನನಗೆ ಪೊಲೀಸರು ಸರಹದ್ದಿನ ಬಗ್ಗೆ ತಿಳಿಸಿದ್ದು, ಅದರೆ ಅವರು ಯಾರು ಎಂದು ನನಗೆ ಹೇಳಲು ಆಗುವುದಿಲ್ಲ. ಘಟನಾ ದಿನದಂದು ನಾನು ಮಾಡಿದ ನಡಾವಳಿಗಳನ್ನು ಗ್ರಾಮಾಂತರ ಠಾಣೆಯ ಪೊಲೀಸರು ಗಮನಿಸಿರಬಹುದು ಎಂದರೆ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಗ್ರಾಮಾಂತರ ಪೊಲೀಸ್ ಠಾಣೆಯ ಕಾಂಪೌಂಡ್‌ನಿಂದ ಸುಮಾರು 25 ಅಡಿ ದೂರದಲ್ಲಿ ವಾಹನವನ್ನು ನಿಲ್ಲಿಸಿರಬಹುದು. ಘಟನಾ ದಿನ ಮತ್ತು ಸಮಯದಂದು ಗ್ರಾಮಾಂತರ ಪೊಲೀಸ್ ಠಾಣೆಯವರು ಚುನಾವಣಾ ಸಂಬಂಧ ಹಲವಾರು ವಾಹನಗಳನ್ನು ತಪಾಸಣೆ ಮಾಡುತ್ತಿದ್ದರು ಎಂದರೆ ಸರಿ. ರೂ.500/- ಮುಖಬೆಲೆಯ 4 ಬಂಡಲ್ ಗಳು ಇದ್ದು ಒಟ್ಟಾರೆ ಆರ್.ಬಿ.ಐ ನಿಂದ ಸೀಲ್ ಮಾಡಲಾದ 20 ಲಕ್ಷ ರೂಪಾಯಿಗಳು ಇತ್ತು. ಸದರಿ ಬಂಡಲ್‌ಗಳು ಮೇಲೆ ಕೆನರಾ ಬ್ಯಾಂಕಿನ ಮೊಹರು ಇತ್ತು ಎಂದರೆ ಸರಿ. ನನಗೂ ಮತ್ತು ಗ್ರಾಮಾಂತರ ಪೊಲೀಸ್ ಠಾಣೆಯ ಅಧಿಕಾರಿಗಳಿಗೂ ಗನ್‌ಮ್ಯಾನ್ ನವರು ನೀಡಿದ ಇಂಡೆಂಟ್ ಅನ್ನು ಹಾಜರುಪಡಿಸಿದರು ಸಹ ನಾವು ಸಮಾಧಾನಗೊಳ್ಳಲಿಲ್ಲ ಎಂದರೆ ಸರಿಯಲ್ಲ. ಘಟನೆಯನ್ನು ವಿಡಿಯೋ ಚಿತ್ರೀಕರಣ ಮಾಡಲು ನಮಗೆ ತೊಂದರೆ ಇರಲಿಲ್ಲ. ಪಟ್ಟಣ ಪೊಲೀಸ್ ಠಾಣೆಯವರು ತನಿಖೆ ಸಂಬಂಧ ನನಗೆ ನೋಟಿಸ್ ನೀಡಿರುವುದಿಲ್ಲ.

ನನಗೆ ಘಟನಾ ದಿನದಂದೇ ನಾನು ಅಮಾನತ್ತು ಪಡಿಸಿಕೊಳ್ಳಲಾದ ಹಣವು ಎ.ಟಿ.ಎಂ ಯಂತ್ರಕ್ಕೆ ಹಾಕುವ ಹಣ ಎಂದು ಗೊತ್ತಿತ್ತು ಎಂದರೆ ಸರಿಯಲ್ಲ. ನಾನು ಜಪ್ತುಪಡಿಸಿಕೊಳ್ಳಾದ ಹಣವು ಎ.ಟಿ.ಎಂ ಯಂತ್ರಕ್ಕೆ ಹಾಕುವ ಹಣ ಎಂದು ಗೊತ್ತಿದ್ದರು ಸಹ ಒಂದು ಚುನಾವಣಾ ಪಕ್ಷಕ್ಕೆ ಮಸಿ ಬಳಿಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಚುನಾವಣಾ ತಂತ್ರದ ಉದ್ದೇಶದಿಂದ ಪ್ರಚಾರಕ್ಕಾಗಿ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷ್ಯ ನಾಶಮಾಡವ ಉದ್ದೇಶದಿಂದ ವಿಡಿಯೋ ಚಿತ್ರೀಕರಣ ಮಾಡದೇ ಕರ್ತವ್ಯ ಲೋಪ ಎಸಗಿರುತ್ತೇನೆ ಎಂದರೆ ಸರಿಯಲ್ಲ. ಸಾರ್ವಜನಿಕರಿಗೆ ತಲುಪಬೇಕಾದ ಹಣವನ್ನು ಸರಿಯಾದ ಸಮಯಕ್ಕೆ ತಲುಪದಂತೆ ಮಾಡಿ ದಬ್ಬಾಳಿಕೆ ಮಾಡಿ ನಾನೇ ಅಪರಾಧ ಎಸಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಯಾವುದೇ ಸತ್ಯಾಂಶ ಇಲ್ಲದೇ ಇದ್ದರೂ ಒಂದು ರಾಜಕೀಯ ಪಕ್ಷಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳ ಪ್ರಕಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**